# ವೀರ ತಪಸ್ವಿ ಮಂದಿರ

ಮಹಾರಾಷ್ಟ್ರದ ಸೋಲಾಪುರ–ಅಕಲಕೋಟ್ ದಾರಿಯಲ್ಲಿ ಒಂದು ಅತ್ಯದ್ಭುತವಾದ ವೀರ ತಪಸ್ವಿ ದೇವಾಲಯವಿದೆ. ಮಹಾದ್ವಾರ 108 ಅಡಿ ಇದ್ದು, ಪಕ್ಕದಲ್ಲಿ ಕಪ್ಪು ಗ್ರಾನೈಟ್ ನಂದಿ ಸ್ಥಾಪಿತವಾಗಿದೆ. ನಂದಿಯ ಎದುರಾಗಿ ಮೂರು ದೊಡ್ಡ ಹಾವಿನ ಬಾಯಿ ಆಕಾರದ ದೇವಸ್ಥಾನದ ಒಳಹೊಕ್ಕರೆ ನೋಡಲು ಸಿಗುವ ಅದ್ಭುತವೇ ವೃತ್ತಾಕಾರವಾಗಿ ಸ್ಥಾಪಿಸಲ್ಪಟ್ಟ 1008 ಶಿವಲಿಂಗಗಳು. ಮಧ್ಯದಲ್ಲಿ 108 ಅಡಿ ಎತ್ತರದ ವಿಶಾಲ ಲಿಂಗವಿದ್ದು, ಅದರ ಮೇಲೆ ಶ್ರೀಶೈಲ ಪೀಠದ ಆದ್ಯಗುರು ಶಿವಾಚಾರ್ಯ ಮಹಾಸ್ವಾಮಿಯವರ ಮೂರ್ತಿ ಇದೆ. ಮೂಲ ಶಿವಲಿಂಗವಿರುವ ದೇವಸ್ಥಾನದಲ್ಲಿ ಹನ್ನೆರಡು ಜ್ಯೋತಿರ್ಲಿಂಗಗಳ ಸ್ಥಾಪನೆಯನ್ನು ಸಹ ಮಾಡಿದ್ದಾರೆ. ಮೇ 2009ರಲ್ಲಿ ಅದ್ಭುತವಾದ ದೇವಸ್ಥಾನ ಲೋಕಾರ್ಪಣೆಯಾಗಿದ್ದು, ಅತ್ಯಂತ ಆಕರ್ಷಕವಾಗಿದೆ. ಅಲ್ಲದೆ ಈ ದೇವಸ್ಥಾನಕ್ಕೆ ಭೇಟಿ ಕೊಟ್ಟರೆ ಹನ್ನೆರಡು ಜ್ಯೋತಿರ್ಲಿಂಗ ಪ್ರವಾಸ ಮಾಡಿ ದರ್ಶನಭಾಗ್ಯ ಪಡೆದಷ್ಟು ಮನಕೆ ಹರ್ಷವಾಗುವುದರಲ್ಲಿ ಸಂಶಯವಿಲ್ಲ.

–ವಿದ್ಯಾ ಗಾಯತ್ರಿ ಜೋಶಿ, ಬೆಂಗಳೂರು





# ಕಳಸದ ಅದ್ಭುತ ಕರಕುಶಲಗಾರ

ಚಿಕ್ಕಮಗಳೂರು ಜಿಲ್ಲೆಯ ಕಳಸದ ಹಂದಿಗೋಡ್ ಎಸ್ಟೇಟ್‌ನ ಪೂರ್ಣಚಂದ್ರ ಹೆಬ್ಬಾರ್ ಕರಕುಶಲ ಕಲೆಯಲ್ಲಿ ತೊಡಗಿಕೊಂಡವರು. ಕೃಷಿ, ಎರೆಗೊಬ್ಬರ ಘಟಕ, ಕಟ್ಟಡಗಳ ಕೆಲಸ, ಪಶುಸಾಕಾಣಿಕೆ... ಹೀಗೆ ಹತ್ತು ಹಲವು ಕಾರ್ಯಗಳಲ್ಲಿಯೂ ತೊಡಗಿಕೊಂಡಿರುವ ಅವರು ಮರದ ಕರಕುಶಲ ಸಾಮಗ್ರಿಗಳನ್ನು ಮಾಡುತ್ತಿದ್ದಾರೆ. ಅಲ್ಲದೆ, ಮರದ ಟೀಪಾಯ್, ಮಡಚುವ ಟೇಬಲ್, ಪೆನ್ ಸ್ಟ್ಯಾಂಡ್, ವಿನೂತನ ಈಳಿಗೆ ಮಣೆ, ಕಾಯಿ ತುರಿಮಣೆ, ಸ್ಟೂಲ್, ಡೆಸ್ಕ್, ರೈಟಿಂಗ್ ಟೇಬಲ್, ಸ್ಟೇಜ್‌ಗಾಗಿ ಪೋಡಿಯಂ... ಹೀಗೆ ಮರದ ನೂರಾರು ಪೀಠೋಪಕರಣಗಳನ್ನು ತಾವೇ ತಯಾರಿಸಿ ಬಂಧುಗಳಿಗೆ, ಗೆಳೆಯರಿಗೆ, ಶಾಲೆಗಳಿಗೆ ಕೊಡುಗೆಯಾಗಿ ನೀಡಿದ್ದಾರೆ.

ಈಚೆಗೆ ಅವರ ಕರಕುಶಲತೆಗೆ ಹೊಸದಾಗಿ ಸೇರ್ಪಡೆಗೊಂಡಿದ್ದು ಕರಟಕಲೆ. ಬೆಂಕಿಗೆ ಹಾಕಿ ಸುಡಬಹುದಾದ ತೆಂಗಿನಕಾಯಿ ಕರಟಗಳನ್ನು ಕಸದಿಂದ ರಸ ತತ್ವದನ್ವಯ ಪಾಲಿಶ್ ಮಾಡಿ ವಿವಿಧ ರೀತಿಯ ವಿನ್ಯಾಸಗಳಿಂದ ರೂಪಿಸುವ ಈ ಕಲೆ ಅಸಾಮಾನ್ಯವಾದದ್ದು. ಅಪಾರ ತಾಳ್ಮೆ, ಸಮಯವನ್ನು ಬೇಡುವ ಈ ಕಲೆಯಲ್ಲಿ ಪೂರ್ಣಚಂದ್ರ ಸಂಪೂರ್ಣವಾಗಿ ತೊಡಗಿಕೊಂಡಿದ್ದಾರೆ. ಅದರ ಪ್ರತಿಫಲವಾಗಿ ಮೂಡಿಬಂದ ಕರಕುಶಲ ವಸ್ತುವೇ ಚಿತ್ರದಲ್ಲಿ ಕಾಣುತ್ತಿರುವುದು.

–ಸುಕನ್ಯಾ ಕಳಶ

# ಬುದ್ಧನ ಜನ್ಮದಾತೆಯ ದೇಗುಲ

ಈ ಚಿತ್ರದಲ್ಲಿರುವುದು ಸಿದ್ಧಾರ್ಥ ಗೌತಮ ಬುದ್ಧನ ತಾಯಿಯ ಹೆಸರಿನ ದೇವಸ್ಥಾನ. ಇದನ್ನು ಮಾಯಾದೇವಿಯು ಸಿದ್ಧಾರ್ಥನಿಗೆ ಜನ್ಮ ನೀಡಿದ ಸ್ಥಳದಲ್ಲಿಯೇ ಕಟ್ಟಲಾಗಿದೆ. ಸಿದ್ಧಾರ್ಥನಿಗೆ ಜನ್ಮ ನೀಡುವ ಮೊದಲು ಮಾಯಾದೇವಿಯು ಸ್ನಾನ ಮಾಡಿದ ಪವಿತ್ರ ಕೊಳವೂ ಪಕ್ಕದಲ್ಲಿದೆ. ನೇಪಾಳದ ರೂಪಾಂದೇಹಿ ಜಿಲ್ಲೆಯ ಲುಂಬಿನಿಯಲ್ಲಿದೆ ಈ ದೇಗುಲ. ಲುಂಬಿನಿಯು ಭಾರತ ನೇಪಾಳದ ಗಡಿಭಾಗದ ಸುನೌಲಿಯಿಂದ 30 ಕಿ.ಮೀ. ದೂರದಲ್ಲಿದೆ. ಚಿತ್ರದಲ್ಲಿರುವ ಸ್ತಂಭವು ಮೌರ್ಯರ ರಾಜನಾದ ಅಶೋಕನು ಕ್ರಿ.ಪೂ. 249ರಲ್ಲಿ ಸ್ಥಾಪಿಸಿದ್ದು. ಈ ಸ್ತಂಭದ ಕೆಳಭಾಗದಲ್ಲಿ ಬ್ರಾಹ್ಮೀ ಲಿಪಿಯಲ್ಲಿ, 'ಗೌತಮಬುದ್ಧ ಈ ಸ್ಥಳದಲ್ಲಿಯೇ ಹುಟ್ಟಿದ' ಎಂಬ ಮಾಹಿತಿಯನ್ನು ಅಶೋಕನು ಕೆತ್ತಿಸಿದ್ದಾನೆ. ಈ ಬಗ್ಗೆ ಬೆಳಕಿಗೆ ಬಂದಿದ್ದು, ಕ್ರಿ.ಶ. 1890ರಲ್ಲಿ ನಡೆದ ಉತ್ಖನನ ವೇಳೆ.

–ಬಿ. ಸತ್ಯನಾರಾಯಣ ಅರಸ, ಅರೇಬೈಲು

